ತಹಶೀಲ್ದಾರ್
ಹಾಗೂಕಾರ್ಯನಿರ್ವಾಹಕದಂಡಾಧಿಕಾರಿಯವರಕಾರ್ಯಾಲಯ,
ತಾಲ್ಲೂಕುಕಛೇರಿ, ಬೈಂದೂರುತಾಲ್ಲೂಕು,
576214ಉಡುಪಿಜಿಲ್ಲೆ
ಕ.ದೂ.ಸಂಖ್ಯೆ: 08254-251657

ಕಂದಾಯಇಲಾಖೆ

Tahsildar& Executive Magistrate's
Office, Taluk Office, ByndoorTaluk,
Byndoor - 576214Udupi District
Email:tahasildarbyndoor@gmail.com

ಎಂ ಎ ಜಿಸಿಆರ್ 98/2025-26 ದಿನಾಂಕ : 03-11-2026

-:ನೋಟೀಸು:-

ವಿಷಯ: ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಸರ್ಕಾರಿ ಜಮೀನಿನಲ್ಲಿನ ಅಕ್ರಮ ಒತ್ತುವರಿಯನ್ನು ತೆರವುಗೊಳಿಸುವ ಕುರಿತು.

ಉಲ್ಲೇಖಗಳು:

1. ಶ್ರೀ ಎ. ಗೋಪಾಲಶೆಟ್ಟಿ, ತಂದೆ ದಿ. ನಾರಾಯಣಶೆಟ್ಟಿ, ಅಲ್ಸಾಡಿ, ಕವಲಾಡಿಮನೆ, ಕಾಲ್ತೋಡು ಗ್ರಾಮ ಇವರು ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಿರುವ ಅರ್ಜಿ.
2. ಮಾನ್ಯ ಉಚ್ಚ ನ್ಯಾಯಾಲಯದ ಆದೇಶ W.P. No.16510/2026 (KLR-RES), ದಿನಾಂಕ: 08-06-2026
3. ಮಾನ್ಯ ಉಚ್ಚ ನ್ಯಾಯಾಲಯದ ಆದೇಶ . WP 26397/2026 (KLR-RES) ದಿನಾಂಕ::25.08.2026
4. ಮಾನ್ಯ ಉಚ್ಚ ನ್ಯಾಯಾಲಯದ ನ್ಯಾಯಾಂಗ ನಿಂದನಾ ಪ್ರಕರಣ ಸಂಖ್ಯೆ: CCC 1486/2026
5. ಈ ಕಛೇರಿಯ ಸಮಸಂಖ್ಯೆಯ ಜ್ಞಾಪನ ಪತ್ರ ದಿನಾಂಕ: 07-07-2026, 09-07-2026
6. ಕಂದಾಯ ನಿರೀಕ್ಷಕರು, ಬೈಂದೂರು ಇವರ ವರದಿ ಸಂಖ್ಯೆ: ಎನ್.ಡಿ.ಎಸ್.ಐ.ಆರ್. 777/2026-27, ದಿನಾಂಕ: 09-07-2026.

****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಕಾಲ್ತೋಡು ಗ್ರಾಮದ ಸರ್ವೆ ನಂಬ್ರ 250 ರ ಒಟ್ಟು ವಿಸ್ತೀರ್ಣ 7.46 ಎಕರೆ ಸರ್ಕಾರಿ ಜಮೀನಿನ ಒಂದು ಭಾಗವನ್ನು ಶ್ರೀಮತಿ ಜ್ಯೋತಿ ಶೆಟ್ಟಿ ಇವರು ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿರುವುದಲ್ಲದೆ, ಕೃಷಿ ಜಮೀನಿಗೆ ತೆರಳಲು ಸಾರ್ವಜನಿಕರು/ಅರ್ಜಿದಾರರು ಬಳಸುತ್ತಿದ್ದ ದಾರಿಯನ್ನು ಮುಚ್ಚಿರುವುದಾಗಿ ಆರೋಪಿಸಿ, ಶ್ರೀ ಎ. ಗೋಪಾಲ ಶೆಟ್ಟಿ, ತಂದೆ ದಿ. ನಾರಾಯಣಶೆಟ್ಟಿ, ಕಾಲ್ತೋಡು ಗ್ರಾಮ ಇವರು ಮಾನ್ಯ ಉಚ್ಚ ನ್ಯಾಯಾಲಯಕ್ಕೆ W.P. No.16510/2026 (KLR-RES), WP 26397/2026 (KLR-RES) ರಂತೆ ಅರ್ಜಿ ಸಲ್ಲಿಸಿರುತ್ತಾರೆ.

ಸದರಿ ಅರ್ಜಿಯನ್ನು ಪರಿಗಣಿಸಿದ ಮಾನ್ಯ ಉಚ್ಚ ನ್ಯಾಯಾಲಯವು WP 26397/2026 (KLR-RES) ರ ಆದೇಶದಲ್ಲಿ

The compliance of this order be filed before this Court, since the respondent No.4 has not considered the orders passed by this Court in the earlier two writ petitions. It is made clear that, this Court deprecates the action of the respondent No.4 in the event, if no action has been taken to remove the obstruction caused to the public road and same will be viewed seriously. With this observation, writ petition stands

ಸಂಬಂಧಪಟ್ಟ ಸರ್ಕಾರಿ ಜಮೀನಿನಲ್ಲಿನ ಅಕ್ರಮ ಒತ್ತುವರಿಯನ್ನು ತೆರವುಗೊಳಿಸಲು ಕಾನೂನು ರೀತ್ಯಾ ಸೂಕ್ತ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿರುತ್ತದೆ. ಅದರಂತೆ, ಮಾನ್ಯ ಉಚ್ಚ ನ್ಯಾಯಾಲಯದ ಆದೇಶವನ್ನು ಪಾಲಿಸುವ ನಿಟ್ಟಿನಲ್ಲಿ ಸದರಿ ಒತ್ತುವರಿಯನ್ನು ತೆರವುಗೊಳಿಸುವ ಸಲುವಾಗಿ ದಿನಾಂಕ: 09-07-2026 ರಂದು ಪೂರ್ವಾಹ್ನ 11.00 ಗಂಟೆಗೆ ಸ್ಥಳ ಪರಿಶೀಲನೆ ಹಾಗೂ ತೆರವು ಕಾರ್ಯಾಚರಣೆಗೆ ಸಮಯ ನಿಗದಿಪಡಿಸಲಾಗಿತ್ತು.

ಆದರೆ ಸದ್ರಿ ದಿನದಂದು ಕಂದಾಯ ನಿರೀಕ್ಷಕರು, ಬೈಂದೂರು, ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಆಡಳಿತ ಅಧಿಕಾರಿ ಹಾಗೂ ಮೋಜಣಿದಾರರೊಂದಿಗೆ ಸ್ಥಳಕ್ಕೆ ಖುದ್ದಾಗಿ ಭೇಟಿ ನೀಡಿ ಒತ್ತುವರಿ ತೆರವು ಪ್ರಕ್ರಿಯೆಯನ್ನು

ಪ್ರಾರಂಭಿಸಲು ಮುಂದಾದ ಸಂದರ್ಭದಲ್ಲಿ, ಸ್ಥಳದಲ್ಲಿದ್ದ ಎರಡೂ ಕಡೆಯವರ ನಡುವೆ ಉದ್ವಿಗ್ನ ವಾತಾವರಣ ಉಂಟಾಗಿರುತ್ತದೆ. ಈ ಸಂದರ್ಭದಲ್ಲಿ ಒತ್ತುವರಿದಾರರಾದ ಶ್ರೀಮತಿ ಜ್ಯೋತಿ ಶೆಟ್ಟಿ ಇವರು ಸ್ಥಳದಲ್ಲಿದ್ದವರ ಸಮಕ್ಷಮ ಒತ್ತುವರಿಯನ್ನು ಸ್ವಯಂಪ್ರೇರಿತವಾಗಿ ತೆರವುಗೊಳಿಸಲು ಒಂದು ವಾರದ ಕಾಲಾವಕಾಶವನ್ನು ಕೋರಿರುತ್ತಾರೆ. ಆದರೆ, ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ನಿಗದಿತ ಅವಧಿಯಲ್ಲಿ ಕ್ರಮ ಕೈಗೊಳ್ಳಬೇಕಾಗಿರುವುದರಿಂದ, ಸದರಿ ಒತ್ತುವರಿಯನ್ನು ತೆರವುಗೊಳಿಸಲು ಮೂರು ದಿನಗಳ ಕಾಲಾವಕಾಶವನ್ನು ನೀಡಲಾಗಿರುತ್ತದೆ. ಆದರೆ ತಾವು ನಿಯಮಾನುಸಾರ ಮುಂದಿನ ಕ್ರಮವಹಿಸುವ ಸಂಬಂಧ ಯಾವುದೇ ಸ್ಪಂದನೆ ನೀಡದೇ ಇದ್ದ ಹಿನ್ನಲೆಯಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ಆದೇಶವನ್ನು ನಿಯಮಾನುಸಾರ ಅನುಷ್ಠಾನಗೊಳಿಸುವಲ್ಲಿ ಅಸಾಧ್ಯವಾಗಿರುತ್ತದೆ. ಪ್ರಸ್ತುತ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಅರ್ಜಿದಾರರು CCC 1486/2026 ರಂತೆ ನ್ಯಾಯಾಂಗ ನಿಂದನಾ ಪ್ರಕರಣವನ್ನು ದಾಖಲಿಸಿದ್ದು, ಅದರಂತೆ ಘನ ನ್ಯಾಯಾಲಯದ WP 26397/2026 (KLR-RES) ರಲ್ಲಿ ದಿನಾಂಕ:25.08.2026 ರಂದು ನೀಡಿರುವ ಆದೇಶವನ್ನು ನಿಯಮಾನುಸಾರ ಅನುಷ್ಠಾನಗೊಳಿಸಿ, ಘನ ನ್ಯಾಯಾಲಯಕ್ಕೆ ಅನುಪಾಲನಾ ವರದಿ ಸಲ್ಲಿಸಬೇಕಾಗಿರುತ್ತದೆ.

ಆದ್ದರಿಂದ, ಮಾನ್ಯ ಉಚ್ಚ ನ್ಯಾಯಾಲಯದ ಆದೇಶದನ್ವಯ ಕಾಲ್ತೋಡು ಗ್ರಾಮದ ಸರ್ವೆ ನಂಬ್ರ 250 ರಲ್ಲಿನ ಸರ್ಕಾರಿ ಜಮೀನಿನಲ್ಲಿ ತಾವು ಮಾಡಿಕೊಂಡಿರುವ ಅಕ್ರಮ ಒತ್ತುವರಿಯನ್ನು ಈ ನೋಟೀಸು ತಲುಪಿದ ದಿನಾಂಕದಿಂದ 02 ದಿನಗಳೊಳಗಾಗಿ ಸ್ವಯಂಪ್ರೇರಿತವಾಗಿ ತೆರವುಗೊಳಿಸಿ, ಸರ್ಕಾರಿ ಜಮೀನನ್ನು ಇಲಾಖೆಯ ವಶಕ್ಕೆ ಒಪ್ಪಿಸುವಂತೆ ಈ ಮೂಲಕ ಸೂಚಿಸಲಾಗಿದೆ. ತಪ್ಪಿದಲ್ಲಿ, ದಿನಾಂಕ: 07-11-2026 ರಂದು ಕಂದಾಯ ಇಲಾಖೆಯ ವತಿಯಿಂದ ಕಾರ್ಯಾಚರಣೆ ಮೂಲಕ ಸದರಿ ಅಕ್ರಮ ಒತ್ತುವರಿಯನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುವುದು. ಸದರಿ ತೆರವು ಕಾರ್ಯಾಚರಣೆಗೆ ತಗಲುವ ವೆಚ್ಚವನ್ನು ತಮ್ಮಿಂದಲೇ ವಸೂಲಿ ಮಾಡಲಾಗುವುದು ಹಾಗೂ ಈ ಸಂಬಂಧ ನಿಯಮಾನುಸಾರ ಮುಂದಿನ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಈ ಮೂಲಕ ಅಂತಿಮವಾಗಿ ತಿಳಿಸಲಾಗಿದೆ.

ತಹಶೀಲ್ದಾರರು
ಬೈಂದೂರು ತಾಲೂಕು

ಇವರಿಗೆ:
ಶ್ರೀಮತಿ ಜ್ಯೋತಿ ಶೆಟ್ಟಿ,ಕಾಲ್ತೋಡು ಗ್ರಾಮ.

ಪ್ರತಿ:

1. ಪೊಲೀಸ್ ಉಪನಿರೀಕ್ಷಕರು, ಬೈಂದೂರು - ಇವರಿಗೆ ಸೂಕ್ತ ಕ್ರಮ ಹಾಗೂ ಅಗತ್ಯ ಸಹಕಾರ ನೀಡುವ ಬಗ್ಗೆ
2. ಕಂದಾಯ ನಿರೀಕ್ಷಕರು, ಬೈಂದೂರು – ಸೂಕ್ತ ಮುಂದಿನ ಕ್ರಮಕ್ಕಾಗಿ.
3. ಪಂಚಾಯತ್ ಅಭಿವೃದ್ಧಿ ಅಧಿಕಾರಿ - ಸೂಕ್ತ ಮುಂದಿನ ಕ್ರಮಕ್ಕಾಗಿ
4. ಗ್ರಾಮ ಆಡಳಿತ ಅಧಿಕಾರಿ, ಕಾಲ್ತೋಡು – ಸದರಿ ನೋಟೀಸನ್ನು ಸಂಬಂಧಪಟ್ಟವರಿಗೆ ಜಾರಿಗೊಳಿಸಿ, ಜಾರಿ ಮಾಡಿದ ಪ್ರತಿಯೊಂದಿಗೆ ಈ ಕಛೇರಿಗೆ ವರದಿ ಸಲ್ಲಿಸುವುದು.
5. ತಾಲೂಕು ಭೂಮಾಪಕರು ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಛೇರಿ ಬೈಂದೂರು ಇವರಿಗೆ ಸೂಕ್ತ ಮುಂದಿನ ಕ್ರಮಕ್ಕಾಗಿ
6. ಶ್ರೀ ಎ. ಗೋಪಾಲಶೆಟ್ಟಿ, ತಂದೆ ದಿ. ನಾರಾಯಣ ಶೆಟ್ಟಿ, ಅಲ್ಸಾಡಿ, ಕವಲಾಡಿಮನೆ, ಕಾಲ್ತೋಡು ಗ್ರಾಮ ಇವರಿಗೆ ಮಾಹಿತಿಗಾಗಿ